

"ಹೆಸರೇನೇ?"

"ಚಂಪಾ..."

"ಎಷ್ಟೊರ್ಷ?"

"ಮೂವತ್ತು."

"ಮದುವೆ, ಗಿದುವೆ?"

"ಆಗಿತ್ತು..."

"ಮತ್ತೆ?"

"ಅವರು ಹೋಗ್ಬಿಟ್ರು. ಎಂಟೊರ್ಷ ಆಯ್ತು..."

"ಗಂಡ ಅನ್ನೋ ವಸ್ತು ಇದ್ದಿದ್ರೆ ಕಂಡೋರ ಮನೆಗೆ ಹೇಲು, ಉಚ್ಚೆ ಬಳಿಯೋಕೆ ನೀನ್ಯಾಕೆ ಬರ್‍ತಿದ್ದಿ ಹೇಳು, ಎಲ್ಲಾ ಗ್ರಾಚಾರ..."

"..."

"ಮುದುಕ್ರು ತದುಕ್ರನ್ನ ನೋಡ್ಕಂಡು ಅಭ್ಯಾಸ ಉಂಟಾ?"

"ಕಡೆಗಾಲ್ದಲ್ಲಿ ಅಪ್ಪ ನೆಲ ಕಚ್ಚಿದ್ದ. ನಾನೇ ನೋಡ್ಕಂಡಿದ್ದು..."

"ತಿಂಗಳು ತಿಂಗಳೂ ಮುಟ್ಟಾಗ್ತಿ ಅಂತ ಕಾಣುತ್ತೆ ಅಲ್ವಾ?"

"..."

"ಕೇಳೋ ಪ್ರಶ್ನೇನೇ ಅಲ್ಲ ಬಿಡು. ಏನ್ಮಾಡೋಕಾಗುತ್ತೆ? ನಾವೂ ಒಂದಿಷ್ಟು ಅನುಸರಣೆ ಮಾಡ್ಕಂಡು ಹೋಗ್ಬೇಕಲ್ಲ..."

"ಯಾಕೆ ಹೇಳ್ತೀದೀನಿ ಅಂದ್ರೆ ನಮ್ಮನೇಲಿ ಮಡಿ ಸ್ವಲ್ಪ ಜಾಸ್ತೀನೇ ಕಣೇ. ದೇವರಕೋಣೇಲಿ ಸಾಲಿಗ್ರಾಮ ಉಂಟು. ಮುಟ್ಟುಚಟ್ಟು ಆಯ್ತೂಂದ್ರೆ ಮನೆಬಾಗ್ಲಿಗೆ ಬಂದು ಸುಳು ಕೊಡ್ತಾನೆ ನಾಗಪ್ಪ. ಮನೇ ಒಳಗೆ ಕೆಂಜಿರುವೆ ಏಳುತ್ತೆ. ಹಾಲು, ಮೊಸರಿಗೆ ನಾತ ಬರುತ್ತೆ..."

"..."